ಶ್ರೀ ಆರ್. ಎಂ. ಪಾಟೀಲ್.—ಕಾರ್ಪೊರೇಷನ್ನಿನವರು ಈಗ ಏನೇನು ಮಾಡಬೇಕೋ ಅದನ್ನೆಲ್ಲಾ ಮಾಡುತ್ತಿದ್ದಾರೆ. ಆ ಬಗ್ಗೆ ಕ್ರೈಗೊಳ್ಳಬೇಕಾದ ಇನ್ನೂ ಯಾವುದಾದರೂ ಮಾರ್ಗ ಗಳಿದ್ದರೆ ತಾವು ಸಲಹೆ ಮಾಡಬಹುದು. ಈಗ ಶ್ರೀ ಡೆಮೆರೋ ಅವರೂ ಮಕ್ಕು ಹುಚ್ಚಮಾಸ್ತಿ ಗೌಡರೂ ಕೆಲವು ಸಲಹೆಗಳನ್ನು ಮಾಡಿದ್ದಾರೆ. ಅಂಥಾ ಸಲಹೆಗಳಿದ್ದರೆ ತಾವು ಮಾಡಬಹುದು.

ಶ್ರೀ ಬಿ. ಭಾಸ್ಕರಶೆಟ್ಟಿ.—ಈಗ ಸಾಧಾರಣವಾಗಿ 2 ಸಾವಿರ ಚಿಲ್ಲರೆ ಹುಚ್ಚುನಾಯಿಗಳು ಇರುವುದರಿಂದ ತಮ್ಮ ಅಧಿಕಾರಾವಧಿಯಲ್ಲಿ ಹುಚ್ಚುನಾಯಿಗಳ ಕಾಟ ಜಾಸ್ತಿಯಾಗಲು ಕಾರಣವೇನು?

ಶ್ರೀ ಆರ್. ಎಂ. ಪಾಟೀರ್.—ಅವನ್ನು ಸಾಕುವವರು ಅನಮರ್ಥರಾಗಿದ್ದಾರೆ. ಅದಕ್ಕೊನ್ಸರ ಅವುಗಳ ಆರೋಗ್ಯಕೆಟ್ಟು ಕಾಟ ಜಾಸ್ತಿಯಾಗಿದೆ.

ಶ್ರೀ ವಾಟಾಳ್ ನಾಗರಾಜ್.—ಇಷ್ಟೊಂದು ಹುಚ್ಚುನಾಯಿಗಳ ಹೆಕ್ಕಿ, ಯಾವ ಒಂದು ಹುಚ್ಚುನಾಯಿಯೂ ತಮ್ಮನ್ನು ಅಟ್ಟಿಸಿಕೊಂಡು ಬರಲಲ್ಲವೇ ?

(ನಗು)

[*No answer*]

ಶ್ರೀ ಎಂ. ಕೆ. ಬೊಮ್ಮೇಗೌಡ.—ಜಿಲ್ಲೆಗಳಲ್ಲಿರುವ ಆಸ್ಪತ್ರೆಗಳಲ್ಲಿ ಹುಚ್ಚುನಾಯಿಗಳು ಕಚ್ಚಿದ್ದಕ್ಕೆ ತಕ್ಕ ಚಿಕಿತ್ಸೆಯನ್ನು ಮಾಡುತ್ತಾರೆ. ಆದರೆ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಡಿಸ್ಪೆನ್ಸರಿಗಳಲ್ಲಿಯೂ ಅಂತಹ ಚಿಕಿತ್ಸೆಯನ್ನು ಪ್ರಾರಂಭಮಾಡುವುದಕ್ಕೆ ಸಾಧ್ಯವೇ ?

ಶ್ರೀ ಆರ್. ಎಂ. ಪಾಟೀರ್.—ಈಗ ಜಿಲ್ಲಾವಾರು ಎಲ್ಲಾ ಆಸ್ಪತ್ರೆಗಳಲ್ಲಿ ಆ ರೀತಿಯ ಚಿಕಿತ್ಸೆಗೆ ತಕ್ಕ ವ್ಯವಸ್ಥೆ ಇದೆ. ಅದು ಬಹಳ ಕಾಸ್ಟ್ಲಿ ಮೆಡಿಸಿನ್. ಆದರಿಂದ ಎಲ್ಲಾ ಕಡೆಗಳಲ್ಲಿ ಆ ವ್ಯವಸ್ಥೆ ಮಾಡುವುದು ಸ್ವಲ್ಪ ಕಷ್ಟವಾಗುತ್ತದೆ. ಆದರೂ ಅದಕ್ಕೆ ತಕ್ಕ ವ್ಯವಸ್ಥೆ ಮಾಡಲಾಗುತ್ತದೆ.

Sri H. SIDDAVEERAPPA.—Has it come to the notice of the Hon'ble Minister that sufficient quantity of serum is not stocked to meet such a contingency especially in Taluk Headquarters ?

Sri R. M. PATIL.—I do not know that.

ಶ್ರೀ ಎಸ್. ಶ್ರೀಕಂಠಯ್ಯ.—ಇತ್ತೀಚೆಗೆ ಸಾರ್ವಜನಿಕ ಸ್ಥಳಗಳಲ್ಲಿ ಒಂದು ಬೋನಿನಲ್ಲಿ ನಾಯಿಗಳನ್ನೆಲ್ಲಾ ಕೂಡಿಸಿ ಸ್ಪೆನೊಗ್ಯಾನ್ ಹೊಡೆಯುತ್ತಾರೆ. ಹುಡುಗರು, ಹೆಂಗಸರು, ಮಕ್ಕಳೂ ತಿರುಗಾಡುವ ಸಾರ್ವಜನಿಕ ರಸ್ತೆಗಳಲ್ಲಿಯೇ ಈ ಕೆಲಸ ಮಾಡುತ್ತಾರೆ. ಇದನ್ನು ತಪ್ಪಿಸಲು ಹುಡುಗರ ಮುಂದೆ ಈ ಕಾರ್ಯ ಮಾಡದೇಇರುವ ಹಾಗೆ ಸೂಕ್ತ ಕಾರ್ಯಕ್ರಮವನ್ನು ಸರ್ಕಾರದವರು ತೆಗೆದುಕೊಳ್ಳುತ್ತಾರೆಯೇ ?

ಶ್ರೀ ಆರ್. ಎಂ. ಪಾಟೀರ್.—ಆ ವಿಷಯವನ್ನು ಮುನಿಸಿಪಾಲಿಟಿಯವರಿಗೆ ಹೇಳಿದರೆ ಮಾಡುತ್ತಾರೆ.

ಶ್ರೀ ಪಿ. ವಿ. ಐತಾಳ.—ಕೇಂದ್ರ ಸರ್ಕಾರದವರು ಕುಟುಂಬ ಯೋಜನೆಗಾಗಿ ಎಷ್ಟೋ ರೂಪಾಯಿಗಳ ಗ್ರಾಂಟು ಕೊಡುತ್ತಿರುವಾಗ, ನಾಯಿಗಳ ಕುಟುಂಬಕ್ಕೂ ಫ್ಯಾಮಿಲಿ ಪ್ಲಾನಿಂಗ್ ಮಾಡುವ ಕ್ರಮವೇನಾದರೂ ಇದೆಯೇ ? ಅದರ ಬಗ್ಗೆ ಸರ್ಕಾರದವರು ಏನು ಹೇಳುತ್ತಾರೆ ?

Mr. DEPUTY SPEAKER.—It is disallowed.

Dacoity and Theft Cases

69. Sri SADASHIVAPPA PATIL (Deodurg).—

Will the Minister for Home and Municipal Administration be pleased to state :—

(*a*) the number of dacoity and theft cases that occurred in Raichur District in the year 1967 ;

(*b*) the number of cases detected ?

A.—Sri R. M. PATIL (Minister for Home and Municipal Administration).—

(*a*) 7 Cases of dacoity and 352 cases of thefts were reported in Raichur District during the year 1967.

(*b*) 2 cases of dacoity and 198 cases of thefts were detected.

ಶ್ರೀ ಸದಾಶಿವಪ್ಪ ಪಾಟೀಲ್.—ನನ್ನ ಪ್ರಶ್ನೆಗಳಿಗೆ ಉತ್ತರ ಹೇಳಿರುವ ಪ್ರಕಾರ ಮಾನ್ಯ ಮಂತ್ರಿಗಳ ಆದಳಿತ ದೃಷ್ಟಿಯಲ್ಲಿ ಆ ಅಂಕಿ ಸಂಖ್ಯೆಗಳು ಹೆಚ್ಚೋ ಕಡಿಮೆಯೋ ?

ಶ್ರೀ ಆರ್. ಎಂ. ಪಾಟೀಲ್.—ಇದು ಬಹಳ ವೇಗ ಪ್ರಶ್ನೆ. ಈಗ ಆಗಿರುವುದು ಸರಿಯೆಂದು ಹೇಳುವುದಕ್ಕಾಗುವುದಿಲ್ಲ. ಪ್ರತಿಯೊಂದು ಪ್ರಕರಣದಲ್ಲೂ ಯಾವ ತರಹ ಸಾಕ್ಷಿ ಸಿಗುತ್ತದೋ ಸಾಕ್ಷಿದಾರರು ಎಷ್ಟರಮಟ್ಟಿಗೆ ನಿಜವಾಗಿ ಸಾಕ್ಷಿ ಕೋರ್ಟಿನಲ್ಲಿ ಹೇಳುತ್ತಾರೋ ಅದರಮೇಲೆ ಪರಿಣಾಮಕಾರಿಯಾಗುತ್ತದೆ. ಹೆಚ್ಚು ಕಡಿಮೆ ಈ ಪ್ರಶ್ನೆ ಕೇವಲ ಅಂಕಿ ಸಂಖ್ಯೆಗಳ ಮೇಲೆ ನಡೆಯುವಾರದು.

Sri H. SIDDAVEERAPPA.—How many of them have been 'B' sheeted and how many 'C' sheeted ?

Sri R. M. PATIL.—In the year 1967, seven cases of dacoity were reported in Raichur District, out of them three cases were false, two cases are pending trial and two are under investigation. There are no clues with regard to investigation cases. Approximate value of the property lost in these cases is Rs. 11,754.00 and the value of property recovered is about Re. 3,287.00.

ಶ್ರೀ ಸದಾಶಿವಪ್ಪ ಪಾಟೀಲ್.—ಈಗ ಉಳಿದಿರುವ ಪ್ರಕರಣಗಳನ್ನೆಲ್ಲಾ ತನಿಖೆಮಾಡಿ ಪತ್ತೆ ಮಾಡುವುದಕ್ಕೆ ಇನ್ನೂ ಎಷ್ಟು ವರ್ಷಗಳು ಸರ್ಕಾರಕ್ಕೆ ಬೇಕಾಗುತ್ತದೆ ?

Sri R. M. PATIL —With regard to theft cases, 352 cases were reported, out of them 5 cases are false, one case was transferred to the Railway Police, 131 cases were convicted, 35 cases were acquitted, 32 cases are pending trial, 48 cases are under investigation, 97 cases are closed as undetected, and in three cases investigation is refused.

ಶ್ರೀ ಸದಾಶಿವಪ್ಪ ಪಾಟೀಲ್.— 48 ಕೇಸುಗಳನ್ನು ಇನ್‌ವೆಸ್ಟಿಗೇಷನ್ ಮಾಡುವುದಕ್ಕೆ ಎಷ್ಟು ದಿವಸ ಬೇಕಾಗುತ್ತದೆ.

Sri R. M. PATIL.—It depends upon the availability of the evidence and the vigilence of the investigating officer.

ಶ್ರೀ ಸದಾಶಿವಪ್ಪ ಪಾಟೀಲ್.—1957 ನೇ ಇಸವಿಯಲ್ಲಿ 198 ಕೇಸುಗಳನ್ನು ಪತ್ತೆ ಮಾಡರಾಗಿದೆ ಎಂದು ಹೇಳಿದ್ದೀರಿ, ಆದ್ದರಿಂದ ಈ 48 ಕೇಸುಗಳನ್ನು ಸ್ವಲ್ಪ ದಿವಸಗಳಲ್ಲಿಯೇ ಪತ್ತೆ ಮಾಡಬಹುದಲ್ಲವೆ ?

Sri R. M. PATIL.—It may so happen and it may not so happen. I cannot say that such and such thing will be detected. There are various factors which have to be taken into consideration.